# 2019–20ನೇ ಸಾಲಿನ ಕಾರ್ಯಕ್ರಮಗಳು

**ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಗೆ 2019–20 ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳಿಗಾಗಿ ಒಟ್ಟು ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಒಟ್ಟು ರೂ.23.83 ಲಕ್ಷ ಗಳನ್ನು ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡ ಯೋಜನಾ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲಾಗಿದೆ. ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯವತಿಯಿಂದ 2019–20 ನೇ ಸಾಲಿನಲ್ಲಿ ನಡೆಸಲಾದ ಯೋಜನಾ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿದೆ :–**

1. ಅತೀ ಹಿಂದುಳಿದ ಜನಾಂಗವಾದ **ಕಮ್ಮಾರ** ಜನಾಂಗದ ಸಮಗ್ರ ಸ್ಥಿತಿ–ಗತಿಗಳ ಕುರಿತು ದಿನಾಂಕ: 22–09–2019 ರಂದು ತುಮಕೂರಿನಲ್ಲಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ನಡೆಸಲಾಗಿದೆ.

2. ಅತೀ ಹಿಂದುಳಿದ ಅಲೆಮಾರಿ/ಅರೆ–ಅಲೆಮಾರಿ ಜನಾಂಗಗಳಾದ **ಪಿಚಗುಂಟಲ** ಹಾಗೂ **ಕಿಲ್ಲಿಕ್ಯಾತ** ಜನಾಂಗಗಳ ಸಮಗ್ರ ಸ್ಥಿತಿ–ಗತಿಗಳ ಕುರಿತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗಿದೆ.

3. **ಅತೀ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ವಿವಿಧ ತರಬೇತಿ ಕಾರ್ಯಕ್ರಮ ಹಾಗೂ ಆರೋಗ್ಯ ಜಾಗೃತಿ ಶಿಬಿರ** ವನ್ನು ಭದ್ರಾವತಿಯಲ್ಲಿ ದಿನಾಂಕ: 27–11–2019 ರಿಂದ 30–11–2019 ರವರೆಗೆ ಏರ್ಪಡಿಸಲಾಗಿದೆ.

4. ಅತೀ ಹಿಂದುಳಿದ **ಉಪ್ಪಾರ ಸಮಾಜದ ಸಮಗ್ರ ಸ್ಥಿತಿ–ಗತಿಗಳ** ಕುರಿತು ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಲಾಗುತ್ತಿದೆ.

5. ಅತೀ ಹಿಂದುಳಿದ ಅಲೆಮಾರಿ/ಅರೆ–ಅಲೆಮಾರಿ ಜನಾಂಗಗಳಲ್ಲಿನ ಸಾಮಾಜಿಕ ದುಷ್ಟ ಪದ್ಧತಿ ಹಾಗೂ ಮೂಢನಂಬಿಕೆಗಳ ವಿರುದ್ಧ **ಜಾಗೃತಿ/ಅರಿವು ಮೂಡಿಸುವ ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರ** ವನ್ನು ದಾವಣಗೆರೆಯಲ್ಲಿ ದಿನಾಂಕ: 12–02–2020 ರಂದು ನಡೆಸಲಾಗಿದೆ.

6. ಕುವೆಂಪು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕುವೆಂಪು ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ದಿನಾಂಕ: 27–02–2020 ರಂದು ಹಿಂದುಳಿದ ವರ್ಗಗಳಿಗಾಗಿ **ಶ್ರೀ ಎಲ್.ಜಿ. ಹಾವನೂರು ಆಯೋಗದ ಶಿಫಾರಸ್ಸುಗಳ ಪರಿಣಾಮಗಳು** ವಿಷಯದ ಬಗ್ಗೆ ಒಂದು ದಿನದ ವಿಚಾರ ಸಂಕಿರಣವನ್ನು ನಡೆಸಲಾಗಿದೆ.

7. ಕುವೆಂಪು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕುವೆಂಪು ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ದಿನಾಂಕ: 29–02–2020 ರಂದು **ಡಿ. ದೇವರಾಜ ಅರಸು ರವರ ನಂತರದ ಆಡಳಿತದ ಅವಧಿಯಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನ** ವಿಷಯದ ಬಗ್ಗೆ ಒಂದು ದಿನದ ವಿಚಾರ ಸಂಕಿರಣವನ್ನು ನಡೆಸಲಾಗಿದೆ.

## ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು

- 2020–21 ನೇ ಸಾಲಿನಲ್ಲಿ ಈ ಸಂಸ್ಥೆಯ ಯೋಜನಾ ಕಾರ್ಯಕ್ರಮಗಳಿಗಾಗಿ ಒಟ್ಟು ರೂ.25.00 ಲಕ್ಷಗಳನ್ನು ನಿಗಧಿಪಡಿಸಲಾಗಿತ್ತು.

- ಕೋವಿಡ್–19 ರ ನಿಯಂತ್ರಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾರ್ಗಸೂಚಿಗಳನ್ವಯ ಸಾರ್ವಜನಿಕ ಸಭೆ/ವಿಚಾರ ಸಂಕಿರಣಗಳು/ತರಬೇತಿ ಕಾರ್ಯಾಗಾರಗಳನ್ನು ನಡೆಸಲು ಸಾಧ್ಯವಾಗದ ಕಾರಣ ಈ ಸಂಸ್ಥೆಗೆ ನಿಗಧಿಯಾಗಿದ್ದ ಅನುದಾನವನ್ನು ಬಿಡುಗಡೆ ಮಾಡದೇ ಇರಲು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರಿಗೆ ಪತ್ರವನ್ನು ಬರೆಯಲಾಗಿದೆ.

- ಆದಾಗ್ಯೂ ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಲೆಮಾರಿ–ಅರೆ ಅಲೆಮಾರಿ ಕೋಶ ಹಾಗೂ ಕನ್ನಡ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ–ಅರೆ ಅಲೆಮಾರಿ ಜನಾಂಗಗಳಾದ **ಬುಡಬುಡಕಿ–ಜೋಷಿ–ಗೋಂಧಲಿ, ಚಾರ, ಸಾನ್ಸಿಯ (ಕಂಜರಭಾಟ್), ಡವೇರಿ, ಫಿಸಾಡಿ, ಗೋಪಾಲ, ಗೊಲ್ಲ, ಸಿಕ್ಕಲಿಗಾರ, ದರ್ವೇಶ್, ದೊಂಬಿದಾಸ, ಬೈಲಪತ್ತಾರ್** ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಲು ಪೂರ್ವಭಾವಿ ಸಿದ್ಧತೆಗಳನ್ನು ನಡೆಸಲಾಗುತ್ತಿದೆ.

# ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು

ಈ ಸಂಸ್ಥೆಯವತಿಯಿಂದ 2021-22 ನೇ ಸಾಲಿನಲ್ಲಿ ಅನುದಾನ ಲಭ್ಯತೆಗನುಗುಣವಾಗಿ ಈ ಕೆಳಕಂಡ ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.

1) ರಾಜ್ಯದ ಯಾವುದೇ ವಿಶ್ವವಿದ್ಯಾಲಯಗಳ ಮಾನವಶಾಸ್ತ್ರ ಅಧ್ಯಯನ ವಿಭಾಗದ ಸಹಯೋಗದಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ

2) ಅತೀ ಹಿಂದುಳಿದ ವರ್ಗಗಳ ಮಹಿಳೆಯರು ಸ್ವಾವಲಂಬನ ಜೀವನ ನಡೆಸಲು ಅನುವಾಗುವಂತೆ ಕರಕುಶಲ ಕಲೆಗಳ ಬಗ್ಗೆ ತರಬೇತಿ ಕಾರ್ಯಾಗಾರ

3) ಅತ್ಯಂತ ಹಿಂದುಳಿದ ಸಮುದಾಯಗಳ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಔದ್ಯೋಗಿಕ ಹಾಗೂ ಆರ್ಥಿಕ ಸ್ಥಿತಿ-ಗತಿಗಳ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಾಣ

4) ಹಿಂದುಳಿದ ವರ್ಗಗಳು ಎದುರಿಸುತ್ತಿರುವ ಪ್ರಚಲಿತ ಸಮಸ್ಯೆ ಹಾಗೂ ಪರಿಹಾರಗಳ ಬಗ್ಗೆ ವಿಚಾರಗೋಷ್ಠಿ

5) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಹಿಂದುಳಿದ ವರ್ಗಗಳಿಗಾಗಿ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಫಲಶೃತಿ ಬಗ್ಗೆ ವಿಚಾರ ಸಂಕಿರಣ

6) ಅತ್ಯಂತ ಹಿಂದುಳಿದ ವರ್ಗಗಳಲ್ಲಿ ಕಂಡುಬರುವ ಮೌಢ್ಯಗಳು/ಅಸಂಬದ್ಧ ಆಚರಣೆಗಳ ನಿರ್ಮೂಲನೆ ಬಗ್ಗೆ ಅರಿವು/ಜಾಗೃತಿ ಶಿಬಿರ

7) ಅತೀ ಹಿಂದುಳಿದ ಸಮುದಾಯಗಳ ಕುಲಕಸುಬುಗಳ ಪುನಶ್ಚೇತನಕ್ಕಾಗಿ ತರಬೇತಿ ಕಾರ್ಯಾಗಾರ